**ಪಾಠ 9** **ನವೆಂಬರ್ 24–30**

# ಅತ್ಯಂತ ಮನಗಾಣಿಸುವ ಐಕ್ಯತೆ



## ಸಬ್ಬತಿನ ಮದ್ಯಾಹ್ನ

**ಈ ವಾರದ ಅಧ್ಯಾಯನಕ್ಕಾಗಿ ಓದಿರಿ: ಯೋಹಾನ 11:51,52; ಎಫೆ 2:13–16, 2ಕೊರಿಂಥ 5:17–21; ಎಫೆ 4:25, 5:2; ರೋಮ 14:1–6, ಅಕೃ 1:14.**

**ಸ್ಮರಣ ವಾಕ್ಯ: ಇದನ್ನು ತನ್ನಷ್ಟಕ್ಕೆ ತಾನೇ ಹೇಳಲಿಲ್ಲ; ಆದರೆ ತಾನು ಆ ವರುಷದ ಮಹಾಯಾಜಕನಾಗಿದ್ದದರಿಂದ ದೇವಪ್ರೇರಣೆಯಿಂದ ಮಾತಾಡಿ ಯೇಸು ಆ ಜನಕ್ಕೋಸ್ಕರ ಮಾತ್ರವಲ್ಲದೆ ಚದರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವದಕ್ಕೆ ಸಹ ಸಾಯುವದಕ್ಕಿದ್ದನು. ಯೋಹಾನ 11:51,52.**

ಹೋದ ವಾರ, ಕೊನೆಯಕಾಲದ ವಾಕ್ಯಗಳ ಸತ್ಯವು ಮತ್ತು ಯೇಸು ಕ್ರಿಸ್ತನು ರಕ್ಷಕನು ಎಂಬುದು ಮುಖ್ಯವಾಗಿ ಇಟ್ಟುಕೊಂಡು ಸಾಮಾನ್ಯ ಸಂದೇಶಗಳ ಮೂಲಕ ಐಕ್ಯತೆಯನ್ನು ನಾವು ಕಾಣಬಹುದು ಎಂಬುದನ್ನು ಅಧ್ಯಾಯನ ಮಾಡಿದ್ದೇವೆ. ಜಗತ್ತಿಗೆ ಸುವಾರ್ತೆ ಸಾರುವುದಕ್ಕೆ ದೇವರ ಕರೆಯುವಿಕೆ ಮತ್ತು ದೇವರು ನಮಗೆ ಕೊಟ್ಟ ಸಂದೇಶಗಳು ಯಾರು ಎಂಬುದನ್ನು ತಿಳಿಸುತ್ತದೆ. ಈ ವಾರ ಸಭೆಯ ಧ್ಯೆಯ ಮತ್ತು ದೈನಂದಿನ ಕ್ರೈಸ್ತೀಯ ಬದುಕನ್ನು ಸಭೆಯ ಐಕ್ಯತೆಯು ಹೇಗೆ ವ್ಯಕ್ತಪಡಿಸುತ್ತದೆಂಬುದುರ ಕಡೆಗೆ ದೃಷ್ಟಿ ಹರಿಸೋಣ. ಯೇಸು ಸ್ವಾಮಿಯ ಪ್ರಕಾರ ಸಭೆಯು ಸುಮ್ಮಸುಮ್ಮನೆ ರಕ್ಷಣೆ ಮತ್ತು ಮರುಮೈತ್ರಿಯ ದೇವರ ಸಂದೇಶವನ್ನು ಪ್ರಚಾರ ಮಾಡುವುದಿಲ್ಲ,

ಮುಖ್ಯವಾಗಿ ಸಭೆಯ ಐಕ್ಯತೆಯೇ ಮರುಮೈತ್ರಿಯನ್ನು ವ್ಯಕ್ತ ಪಡಿಸುತ್ತದೆ. ಪಾಪ ಮತ್ತು ದ್ರೋಹ/ಬಂಡಾಯ ತುಂಬಿರುವ ಈ ಜಗತ್ತಿನಲ್ಲಿ ಯೇಸು ಕ್ರಿಸ್ತನ ರಕ್ಷಣೆ ಕಾರ್ಯ ಮತ್ತು ಆತನ ಶಕ್ತಿಗೆ ಸಭೆಯು ಸಾಕ್ಷಿಯಾಗಿ ನಿಂತಿದೆ. ಸಾಕ್ಷಿಗಾಗಿ ಸಭೆಯಲ್ಲಿ ಐಕ್ಯತೆ ಇಲ್ಲದಿದ್ದರೆ ಯೇಸುವಿನ ರಕ್ಷಿಸುವ ಶಕ್ತಿಯು ಜಗತ್ತಿಗೆ ಹೆಚ್ಚಾಗಿ ಕಾಣಿಸುವುದಿಲ್ಲ. ಕ್ರಿಸ್ತನಲ್ಲಿನ ಐಕ್ಯತೆಯು ಎಲ್ಲರಲ್ಲೂ ಐಕ್ಯತೆಯನ್ನು ಸ್ಥಾಪಿಸುತ್ತದೆ.
ಈ ಐಕ್ಯತೆಯು ಪಾಪಗಳನ್ನು ತೆಗೆದು ಹಾಕುವ ಕ್ರಿಸ್ತನ ಶಕ್ತಿಯ ಪ್ರಭಾವ ಜಗತ್ತಿಗೆ ನಂಬಿಕೆ ತರುವಂಥ ಸಾಕ್ಷಿಯಾಗಿದೆ. ಎಲ್ಲೆನ್ ಜಿ ವೈಟ್, ಕಮೆಂಟ್ಸ್ ದಿ ಎಸ್ ಡಿ ಎ ಬೈಬಲ್ ಕಾಮೆಂಟ್ರಿ. ಪು. 1148.

**ಭನುವಾರ** **ನವೆಂಬರ್ 25**

**ಯೇಸುವಿನ ಶಿಲುಬೆ ಅಡಿಯಲ್ಲಿ**

ದೇವರು ತನ್ನ ಮಕ್ಕಳಿಗೆ ಆತ್ಮೀಕ ಆಶೀರ್ವಾದಗಳನ್ನು ಕೊಡುತ್ತಾನೆ. ಅದರಲ್ಲಿ ಐಕ್ಯತೆಯು ಸಹ ದೇವರ ವರವಾಗಿದೆ. ಮಾನವನು ತನ್ನ ಪ್ರಯತ್ನ, ಒಳ್ಳೇ ಕೆಲಸಗಳಿಂದ ಉದ್ದೇಶ ಪೂರ್ವಕವಾಗಿ ಐಕ್ಯತೆಯನ್ನು ಸೃಷ್ಟಿ ಮಾಡಿಲ್ಲ. ಯೇಸು ಕ್ರಿಸ್ತನು ತನ್ನ ಮರಣ ಮತ್ತು ಪುನರುತ್ಥಾನ ಮೂಲಕ ಐಕ್ಯತೆಯನ್ನು ಸೃಷ್ಟಿ ಮಾಡುತ್ತಾನೆ. ಆತನ ಮರಣ ಮತ್ತು ಪುನರುತ್ಥಾನದಲ್ಲಿ ನಂಬಿಕೆ ಇಡುತ್ತೇವೆ, ದೀಕ್ಷಾಸ್ನಾನದ ಮೂಲ ನಮ್ಮ ಪಾಪಗಳು ಕ್ಷಮಿಸಲ್ಪಡುತ್ತೇವೆ, ಅನ್ಯೋನ್ಯತೆಯಲ್ಲಿ ನಾವು ಒಂದಾಗಿ, ಮೂರು ದೂತರ ಸಂದೇಶವನ್ನು ಲೋಕಕ್ಕೆ ಸಾರುವ ಮೂಲಕ ನಾವು ಆತನಲ್ಲಿ ಒಂದಾಗಿದ್ದೇವೆ ಮತ್ತು ಬೇರೆಯವರೊಂದಿಗೆ ಐಕ್ಯತೆಯಿಂದ ಇದ್ದೇವೆ.

**ಯೋಹಾನ 11:51,52 ಮತ್ತು ಎಫೆ 1:7–10 ಓದಿರಿ: ಯೇಸುವಿನ ಜೀವನದಲ್ಲಿ ನಡೆದ ಯಾವ ಘಟನೆಯು ಸವೆಂತ್–ಡೇ–ಅಡ್ವೆಂಟಿಸ್ಟರ ಐಕ್ಯತೆಗೆ ತಳಹದಿಯಾಗಿದೆ.**

––––––––––––––––––––––––––––––––––––––––––––––

––––––––––––––––––––––––––––––––––––––––––––––

“ಇದನ್ನು ಅವನು ತನ್ನಷ್ಟಕ್ಕೆ ತಾನೇ ಹೇಳಲಿಲ್ಲ. ಆದರೆ ತಾನು ಆ ವರುಷದ ಮಹಾಯಾಜಕನಾಗಿದ್ದದರಿಂದ ದೇವ ಪ್ರೇರಣೆಯಿಂದ ಮಾತಾಡಿ ಯೇಸು ಅ ಜನಕ್ಕೋಸಕರ ಸಾಯುವದಕ್ಕಿದ್ದನೆಂದು ಹೇಳಿದನು. ಯೇಸು ಆ ಜನಕೋಸ್ಕರ ಮಾತ್ರವಲ್ಲದೆ ಚದರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವದಕ್ಕೆ ಸಹ ಸಾಯುವದಕ್ಕಿದ್ದನು ಯೋಹಾನ 11:51,52.

ಎಂಥಾ ಆಶ್ಚರ್ಯಕರ ದೇವರು ಕೈಫನನ್ನು ಯೇಸುವಿನ ಮರಣದ ಅರ್ಥವನ್ನು ವಿವರಿಸಲು ಉಪಯೋಗಿಸಿದನು. ಯೇಸುವಿಗೆ ಮರಣವನ್ನು ವಿಧಿಸುವರಿಂದ ಕೈಫನು ತಾನು ಏನು ಮಾಡುತ್ತದ್ದಾನೆಂಬುದರ ಅರಿವು ಅವನಿಗೆ ಇರಲಿಲ್ಲ. ಆತನ ಹೇಳಿಕೆಯು ಎಷ್ಟು ಆಗಾಧವಾದದ್ದು ಎಂಬ ಪರಿಜ್ಞಾನವು ಅವನಿಗೆ ಇರಲಿಲ್ಲ. ಕೈಫನು ರಾಜಕೀಯ ಹೇಳಿಕೆ ಮಾತ್ರ ಮಾಡುತ್ತಿದ್ದೇನೆ ಎಂಬುದು ಆತನಿಗೆ ಗೊತ್ತಿತ್ತು. ದೇವರ ನಂಬಿಕೆಯ ಜನರು ಒಂದು ದಿನ ಎಲ್ಲರೂ ಒಟ್ಟಾಗಿ ಇರುವ ಜನರಿಗೆ ಯೇಸುವಿನ ಮರಣದ ಅರ್ಥದ ಮೂಲ ಸತ್ಯವನ್ನು ಯೋಹಾನನು ತಿಳಿಸಿದ್ದಾನೆ.

ಸವೆಂತ್–ಡೇ–ಅಡ್ವೆಂಟಿಸ್ಟ್‌ರಾಧ ನಾವುಗಳು ಮತ್ತೇನನ್ನು ನಂಬುತ್ತೇವೆ. ಕ್ರಿಸ್ತನು ನಮಗೋಸ್ಕರ ಸತ್ತನು ಎಂಬುದನ್ನು ಅಂಗೀಕರಿಸಿರುವುದೇ ಐಕ್ಯತೆಗೆ ತಳಹದಿಯಾಗಿದೆ. ಅದರಂತೆಯೇ ದೀಕ್ಷಾಸ್ನಾನದ ಮೂಲಕ ನಾವು ಕ್ರಿಸ್ತನಲ್ಲಿ ಐಕ್ಯತೆಯನ್ನು ಅನುಭವಿಸುವವರಾಗಿದ್ದೇವೆ. ನಿವೆಲ್ಲರೂ ಕ್ರಿಸ್ತ ಯೇಸುವಿನಲ್ಲಿಟ್ಟರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ ಹೇಗೆಂದರೆ ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ (ಗಲಾ 3:26,27). ಕ್ರಿಸ್ತನಲ್ಲಿ ನಂಬಿಕೆಯನ್ನು ಸೂಚಿಸುವ ಸವೆಂತ್–ಡೇ–ಅಡ್ವೆಂಟಿಸ್ಟ್‌ರ ಇನ್ನೊಂದು ಬಂಧವೆಂದರೆ ದೀಕ್ಷಾಸ್ನಾನ ನಮಗೆ ಒಬ್ಬನೇ ತಂದೆ ಹಾಗಾಗಿ ನಾವುಗಳು ದೇವರ ಮಗ ಮತ್ತು ಮಗಳು ಆಗಿದ್ದೇವೆ, ಮತ್ತು ನಮಗೆ ಒಬ್ಬನೇ ರಕ್ಷಕನು ಇದ್ದಾನೆ. ಅವನ ಮೆರಣ ಮತ್ತು ಪುನರುತ್ಥಾನದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಹೊಂದಿದ್ದೇವೆ (ರೋಮ 6:3,4)

**ಸಾಂಸ್ಕೃತಿಕ, ಸಾಮಾಜಿಕ, ಜನಾಂಗೀಯ ಮತ್ತು ರಾಜಕೀಯ ವ್ಯತ್ಯಾಸವು ಸವೆಂತ್–ಡೇ–ಅಡ್ವೆಂಟಿಸ್ಟ್‌ರಾದ ನಮ್ಮಲ್ಲಿ ಇದ್ದರೂ ಕ್ರಿಸ್ತನಲ್ಲಿ ಇರುವ ನಂಬಿಕೆಯಿಂದ ಅವುಗಳನೆಲ್ಲಾ ದಾಟಿ ಹೋಗಬೇಕು**?

**ಸೋಮವಾರ** **ನವೆಂಬರ್** 26

**ಮೈತ್ರಿ ಕರಣದ ಸೇವೆ**

ಹೊಂದಾಣಿಕೆ ಇಲ್ಲದಿರುವುದು, ಕಷ್ಟ, ಯುದ್ಧ ಮತ್ತು ವಿವಾದಗಳಿಗೆ ನಮ್ಮ ಜಗತ್ತನ್ನು ಗುರುತಿಸಲಾಗಿದೆ. ವೈಯಕ್ತಿಕ, ಸಮುದಾಯ ಮತ್ತು ರಾಷ್ಟ್ರದ ಹಂತದಲ್ಲಿ ನಮ್ಮ ಜೀವನವು ವಿವಾದಕ್ಕೆ ಸಿಲುಕಿದೆ ಎಂದು ಅನಿಸುತ್ತದೆ. ಆದರೆ ಐಕ್ಯತೆಯ ಮತ್ತು

ಹೊಂದಾಣಿಕೆ ಇಲ್ಲದಿರುವದು ಶಾಶ್ವತವಾಗಿರುವುದಿಲ್ಲ. ಐಕ್ಯತೆಯನ್ನು ತರುವುದಕ್ಕೆ ದೇವರು ಕೆಲಸ ಮಾಡುತ್ತಿದ್ದಾನೆ. ಆದರೆ ಪಾಪವು ಸಾಮರಸ್ಯಯಿಲ್ಲದಂತೆ ಮಾಡಿದೆ. ದೇವರ ಮರುಮೈತ್ರಿಯ ಶಾಶ್ವತವಾದ ಯೋಜನೆಯು ನಮಗೆ ಸಮಾಧಾನ ತರುವದು.

ಎಫೆ 2:13–16ರಲ್ಲಿ ಪೌಲನು ಯೇಸು ಕ್ರಿಸ್ತನು ಹೇಗೆ ತನ್ನ ನಂಬಿಗಸ್ತರಲ್ಲಿ ಸಮಾಧಾನವನ್ನು ತಂದನು ಎಂಬುದರ ಬಗ್ಗೆ ತಿಳಿಸುತ್ತಾನೆ. ಶಿಲುಬೆಯಲ್ಲಿ ತನ್ನ ಮರಣದ ಮೂಲಕ ಯೆಹೂದ್ಯರು ಮತ್ತು ಅನ್ಯಜನರನ್ನು ಹೇಗೆ ಒಂದುಗೂಡಿಸಿದನು ಮತ್ತು ಅವರನ್ನು ಬೇರ್ಪಡಿಸಿದ ಜನಾಗೀಯ ಮತ್ತು ಧರ್ಮದ ಅಡ್ಡಿಯನ್ನು ನಾಶ ಮಾಡಿದನು.

ಯೆಹೂದ್ಯರಲ್ಲಿ ಮತ್ತು ಅನ್ಯಜನರಲ್ಲಿ ಕ್ರಿಸ್ತನು ಹೇಗೆ ಮೊದಲನೇಯ ಶತಮಾನದಲ್ಲಿ ಮಾಡಬಲ್ಲನೆಂದರೆ. ನಮ್ಮ ಸಭೆಯಲ್ಲಿ ಇಂದು ಅಂಥ ಜನಾಂಗೀಯ ಮತ್ತು ಸಂಸ್ಕೃತಿಯ ಅಡ್ಡಿಗಳು ಜನರನ್ನು ಬೇರ್ಪಡಿಸುವದನ್ನು ಈಗಲೂ ಯೇಸುವು ತಡೆಗಟ್ಟುತ್ತಾನೇ?

**2ಕೊರಿಂಥ 5:17–21, ದೇವರೊಂದಿಗೆ ಮರುಮೈತ್ರಿ ಮಾಡಿಕೊಂಡು ಕ್ರಿಸ್ತನಲ್ಲಿ ನಾವು ಹೊಸ ಸೃಷ್ಟಿಯಾಗಿದ್ದೇವೆ ಎಂದು ಪೌಲನು ಹೇಳುತ್ತಾನೆ. ಹಾಗಾದರೆ ಈ ಲೋಕದಲ್ಲಿ ನಮ್ಮ ಸೇವೆ ಏನು? ಐಕ್ಯತೆಯ ಸಭೆಯಾಗಿ ನಾವು ಯಾವ ವತ್ಯಾಸವನ್ನು ಸಮುದಾಯದಲ್ಲಿ ತರಬಹುದು**?

________________________________________

________________________________________

________________________________________

1. ನಮ್ಮ ಸಭೆಯು ಮೊದಲು ದೇವರಿಂದ ದೂರವಿಡಲ್ಪಟ್ಟ್ ನಂಬಿಗಸ್ತರಿಂದ ಒಳಗೊಂಡಿದೆ, ಆದರೆ ಕ್ರಿಸ್ತನ ತ್ಯಾಗದ ರಕ್ಷಿಸುವ ಕೃಪೆಯಿಂದ, ಪವಿತ್ರಾತ್ಮನ ಮೂಲಕ ದೇವರೊಂದಿಗೆ ಒಂದಾಗಿದ್ದೇವೆ. ಕೊನೆಕಾಲದ ಸಂದೇಶವನ್ನು ಲೋಕಕ್ಕೆ ಸಾರುವುದಕ್ಕೆ ಕರೆಯಲ್ಪಟ್ಟಿದ್ದೇವೆ. ಇನ್ನು ದೇವರಿಂದ ದೂರವಿಡಲ್ಪಟ್ಟ ಜನರನ್ನು ದೇವರೊಂದಿಗೆ ಮರುಮೈತ್ರಿಯಾಗಲು ಆಹ್ವಾನಿಸುವುದು ನಮ್ಮ ಕೆಲಸ/ಸೇವೆಯಾಗಿದೆ.
2. ಸಭೆಯ ಎಂದರೆ ದೇವರ ಮಕ್ಕಳು ಅವರೆಲ್ಲರೂ ಒಬ್ಬರೊಂದಿಗೆ ಒಬ್ಬರು ಐಕ್ಯತೆಯಿಂದ ಇದ್ದಾರೆ, ಕ್ರಿಸ್ತನಲ್ಲಿ ಐಕ್ಯರಾಗಿರುವುದು ಎಂದರೆ. ನಾವು ಒಬ್ಬರೊಂದಿಗೆ ಒಬ್ಬರು ಒಂದಾಗಿದ್ದೇವೆ ಎಂಬ ಅರ್ಥ. ಇದು ಉನ್ನತವಾದ ಆದರ್ಶವಲ್ಲದೆ ಅದು ಉದ್ಧಾರಾಗುವ ಸತ್ಯವಾಗಬೇಕು/ನಿಜಾಂಶವಾಗಬೇಕು. ಒಬ್ಬರೊಂದಿಗೆ ಒಬ್ಬರು ಮರುಮೈತ್ರಿ ಮಾಡಿಕೊಂಡು ಸಮಾಧಾನ ಮತ್ತು ಸಾಮರಸ್ಯದಿಂದ ಸಹೋದರ

ಸಹೋದರಿಯರೊಂದಿಗೆ ಇರುವುದು ಕ್ರಿಸ್ತನು ನಮ್ಮ ಶಿಕ್ಷಕ ಎಂಬುದು ಲೋಕಕ್ಕೆ ಸಾಕ್ಷಿಯಾಗಿದೆ, "ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು(ಯೋಹಾನ 13:35).

3. ಮರುಮೈತ್ರಿಯ ಸೇವೆಯ ಮೂಲಕ ಸಭೆಯು ಜಗತ್ತಿಗೆ ದೇವರ ರಕ್ಷಣೆ ಯೋಜನೆಯು ಸತ್ಯವಾದ ಮತ್ತು ಶಕ್ತಿಯುತ ಎಂದು ತಿಳಿಸುತ್ತದೆ. ಮಹಾ ಯುದ್ಧವು ದೇವರು ಆತನ ಚಾರಿತ್ರ್ಯದ ಬಗ್ಗೆಯಾಗಿದೆ. ಸಭೆಯು ಐಕ್ಯತೆಯನ್ನು ಮತ್ತು ಮರುಮೈತ್ರಿಯನ್ನು ಬೆಳೆಸಿಕೊಳ್ಳುವದರ ಮೂಲಕ ದೇವರ ನಿತ್ಯತ್ವದ ಜ್ಞಾನದ ಕೆಲಸಗಳನ್ನು ಜಗತ್ತು ನೋಡುತ್ತದೆ(ಎಫೆ 3:8–11ಓದಿರಿ)

**ಮಂಗಳವಾರ** **ನವೆಂಬರ್ 27**

**ಕಾರ್ಯರೂಪದ ಐಕ್ಯತೆ**

1902ನೇ ಇಸವಿಯಲ್ಲಿ ಎಲ್ಲೆನ್ ಜಿ ವೈಟ್‌ಮ್ಮನವರು "ಕ್ರಿಸ್ತನು ಇಹಲೋಕದ ಜೀವನದಲ್ಲಿ ಏನಾಗಿದ್ದಾನೋ ಪ್ರತಿಯೊಬ್ಬ ಕ್ರೈಸ್ತನು ಹಾಗೆ ಆಗಬೇಕು, ಯಾವುದೇ ಕಳಂಕವಿಲ್ಲದ ಪರಿಶುದ್ಧತೆಯಲ್ಲದೆ, ಆತನು ತಾಳ್ಮೆಯಲ್ಲಿ ಸಾಮ್ಯತೆ ಮತ್ತು ಮೋಹಕ ಸ್ವಭಾವದಿಂದ ಆತನು ನಮಗೆ ಮಾದರಿಯಾಗಿದ್ದಾನೆ ಎಂದು ಬರೆದಿದ್ದಾರೆ" ಸೈನ್ಸ್ ಆಫ್ ದಿ ಟೈಮ್ಸ್– ಜುಲೈ 16, 1902.

ಈ ಮಾತು ಪದಗಳು ಪೌಲನು ಫಿಲಿಪ್ಪಿಯವರಿಗೆ ಬೇಡಿಕೊಂಡಿದ್ದನು ಜ್ಞಾಪಕ ಮಾಡುತ್ತದೆ. ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ(ಫಿಲಿಪಿ 2:5)

**ಎಫೆ 4:25; 5:2 ,ತ್ತು ಕೊಲೊಸೆ 3:1–17 ಓದಿರಿ ಎರಡು ಪ್ರಶ್ನೆಗಳಿಗೆ ಉತ್ತರಿಸಿ:**

1. **ನಾವು ಯೇಸುವಿಗೆ ವಿಧೇಯರಾಗಿರಲು ನಮ್ಮ ಜೀವನದಲ್ಲಿ ಯಾವಾಗ ವಿಶೇಷವಾಗಿ ಆಹ್ವಾನಿಸಲ್ಪಡುತ್ತೇವೆ?**
2. **ನಮ್ಮ ಸಾರ್ವಜನಿಕ/ಬಹಿರಂಗ ಜೀವನದಲ್ಲಿ ನಾವು ಹೇಗೆ ಯೇಸುವಿನ ಸುವಾರ್ತೆಯ ಸಾಕ್ಷಿಗಳಾಗಿರಬೇಕು?**

––––––––––––––––––––––––––––––––––––––––––––

––––––––––––––––––––––––––––––––––––––––––––

––––––––––––––––––––––––––––––––––––––––––––

ಇನ್ನೂ ಅನೇಕ ವಾಕ್ಯಗಳು ಕ್ರೈಸ್ತರನ್ನು ಯೇಸುವಿನ ಮಾದರಿಯನ್ನು ಹಿಂಬಾಲಿಸಲು ಮತ್ತು ದೇವರ ಕೃಪೆಗೆ ನಿಜವಾಧ ಸಾಕ್ಷಿಗಳಾಗಿರಲು ಇವೆ ಬೇರೆಯವರ ಒಳಿತನ್ನು

ಕೋರುವದಕ್ಕೆ ನಮ್ಮನ್ನು ಆಹ್ವಾನಿಸಲಾಗಿದೆ, ಒಬ್ಬರು ಸರಳವಾಗಿ ಜೀವಿಸಿ, ಹೊರತೋರ್ಪಡಿಸಿದೆ ಆಂತರಿಕ ಆತ್ಮಿಕತೆಗೆ ಗಮನ ಕೊಡಬೇಕು. (ಮತ್ತಾಯ 16:24–26; 1 ಪೇತ್ರ 3:3,4) ಮತ್ತು ಆರೋಗ್ಯಕರ ಜೀವನ ಶೈಲಿಯನ್ನು ಪಾಲಿಸಬೇಕು(1 ಕೊರಿಂಥ 10:31)

ಪ್ರಿಯರೇ, ಪ್ರವಾಸಿಗಳೂ, ಪರದೇಶಸ್ಥರೂ ಆಗಿರುವ ನೀವು ನಿಮ್ಮ ಆತ್ಮದ ಮೇಲೆ ಯುದ್ಧ ಮಾಡುವ ಶಾರೀರಿಕ ಅಭಿಲಾಷೆಗಳಿಗೆ ದೂರವಾಗಿರಬೇಕೆಂದು ನಿಮ್ಮನ್ನು ಎಚ್ಚರಿಸುತ್ತೇನೆ. ನಿಮ್ಮ ನಡವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗವಾಗಿರಲಿ. ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ಪ್ರಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು. ಕ್ರೈಸ್ತೀಯ ಗುಣಗಳು ನಮ್ಮನ್ನು ನೋಡುತ್ತಿರುವವರ ಮೇಲೆ ಬೀರುವ ಪ್ರಭಾವವನ್ನು ಕೀಳಾಗಿ ನಾವು ಆಗಾಗ್ಲೆ ನೋಡುತ್ತೇವೆ. ಕೋಪದ ಕ್ಷಣದಲ್ಲಿ ತಾಳ್ಮೆ, ವಿವಾದ ಮತ್ತು ಮಾನಸಿಕ ಉದ್ದೇಗಕ್ಕೆ ಒಳಗಾದಾಗ ಶಿಸ್ತಿನ ಜೀವನ, ಅಸಹನೀಯ ಮತ್ತು ಒರಟಾದ ಮಾತುಗಳನ್ನು ಕೇಳಿದಾಗ ಸೌಮ್ಯ ಸ್ವಭಾವವುಳ್ಳವರಾಗಿರುವುದು, ಇವುಗಳು ಯೇಸುವಿನ ಆತ್ಮನ ಗುರುತುಗಳು. ಇವುಗಳನ್ನು ಮೀರಿಸಲು ನಮ್ಮನ್ನು ಆಹ್ವಾನಿಸಲಾಗಿದೆ, ಸವೆಂತ್–ಡೇ–ಅಡ್ವೆಂಟಿಸ್ಟ್‌ರಾದ ನಾವುಗಳು ದೇವರ ಗುಣಗಳನ್ನು ತಪ್ಪಾಗಿ ಅರ್ಥಮಾಡಿಕೊಂಡ ಲೋಕಕ್ಕೆ ನಾವು ಸಾಕ್ಷಿಗಳಾಗಿ ನಾವು  ದೇವರ ಮಹಿಮೆ ಮತ್ತು ಒಳ್ಳೇದಕ್ಕೆ ಶಕ್ತಿಯಾಗಿದ್ದೇವೆ.

ಕ್ರಿಸ್ತನ ಪ್ರತಿನಿಧಿಗಳಾದ ನಾವು, ನಂಬಿಗಸ್ತರು ತಮ್ಮ ನೈತಿಕ ನೀತಿ ಮೂಲಕ ಮಾತ್ರವಲ್ಲದೆ ಬೇರೆಯವರ ಒಳ್ಳೆಯದರಲ್ಲಿ ಆಸಕ್ತಿಯಿಂದ ನಾವು ಗುರುತಿಸಲ್ಪಟ್ಟಿದ್ದೇವೆ, ಒಂದುವೇಳೆ ನಮ್ಮ ಧಾರ್ಮಿಕ ಅನುಭವವು ನಿಷ್ಕಪಟವಿಲ್ಲದ್ದಾದರೆ ಅದು ಈ ಲೋಕದಲ್ಲಿ ಪ್ರಭಾವ ಬೀರುತ್ತದೆ. ನಂಬಿಗಸ್ತರು ಒಂದುಗೂಡಿ ಕ್ರಿಸ್ತನ ಗುಣಗಳನ್ನು ಲೋಕಕ್ಕೆ ತಿಳಿಪಡಿಸುವದೇ ಒಂದು ಬಲವಾದ ಸಾಕ್ಷಿಯಾಗಿದೆ.

**ಯಾವ ತರದ ಸಾಕ್ಷಿಯನ್ನು ನೀವು ಬೇರೆಯವರಿಗೆ ಪ್ರದರ್ಶಿಸುತ್ತೀರಿ? ನಿಮ್ಮ ಜೀವನದಲ್ಲಿ ಏನನ್ನು ಕಂಡು ಅವರು ಯೇಸುವನ್ನು ಹಿಂಬಾಲಿಸಲು ಇಚ್ಛೆಸುವರು?**

**ವೈವಿದ್ಯತೆಯಲ್ಲಿ ಐಕ್ಯತೆ**

ರೋಮಾ 14:6 ಮತ್ತು 15 ಅಪೊಸ್ತಲ ಪೌಲನು ರೋಮಾಯ ಸಭೆಯನ್ನು ಆಳವಾಗಿ ಬೇರ್ಪಡಿಸುತ್ತಿದ್ದ ಸಮಸ್ಯೆಗಳ ಬಗ್ಗೆ ಉಪದೇಶ ಮಾಡುತ್ತದ್ದನು. ಈ ಸಮಸ್ಯಗಳಿಗೆ ಅವನು ಹೇಗೆ ಪ್ರತಿಕ್ರಿಯೆಸಿದನೆಂದರೆ, ಒಬ್ಬರಿಗೊಬ್ಬರು ಸಹಿಷ್ಣುತೆ ಮತ್ತು ತಾಳ್ಮೆಯಿಂದ ಇರಲು ರೋಮನ್‌ರನ್ನು ಆಹ್ವಾನಿಸಿ ಮತ್ತು ಅವರು ಈ ವಿಷಯದಿಂದ ಸಭೆಯು ಒಡೆಯದಂತೆ ನೋಡಿಕೊಳ್ಳಿರಿ ಎಂಬುದು.
ಈ ಉಪದೇಶದಿಂದ ನಾವು ಏನು ಕಲಿಯಬಹುದು?

**ರೋಮಾ 14:1–6 ಓದಿರಿ: ಮನಸಾಕ್ಷಿಯು ಯಾವ ಸಮಸ್ಯೆಗಳು ರೋಮಿನ ಸಭೆಯ ಸಭಿಕರು ನಿರ್ಣಯಿಸಿ ಒಬ್ಬರೊಂದಿಗೆ ಒಬ್ಬರು ಅನ್ಯೊನ್ಯತೆಯಲ್ಲಿ ಇರಲಿಲ್ಲ?**

---------------------------------------------

---------------------------------------------

ಈ ವಿಚಾರಗಳು ಯೆಹೂದ್ಯ ಸಂಪ್ರದಾಯದ ಅಶುದ್ಧತೆಗೆ ಸಂಬಂಧಿಸಿರಲಿಲ್ಲ, ಪೌಲನ ಪ್ರಕಾರ ಇವುಗಳು "ಆದರೆ ಸಂದೇಹಾಸ್ಪದವಾದ ಕಾರ್ಯಗಳಿಗೆ ಸಂಬಂಧಿಸಿದವುಗಳು"(ರೋಮ 14:5).

ಈ ವಿವಾದಗಳು ಮೊದಲು ಸೇವಿಸುವಂಥ ಆಹಾರಕ್ಕೆ ಸಂಬಂಧಿಸಿದವುಗಳಾಗಿದ್ದವು. ಯಾಜಕಾಂಡ 11ರಲ್ಲಿ ತಿಳಿಸುವ ಅಶುದ್ಧ ಪ್ರಾಣಿಗಳು ತಿನ್ನಬಾರದು ಎಂಬುದರ ಬಗ್ಗೆ ಪೌಲನು ಇಲ್ಲಿ ಮಾತನಾಡುತ್ತಿಲ್ಲ. ಪೌಲನ ಕಾಲದಲ್ಲಿ ಕ್ರೈಸ್ತರು ದಂದಿ ಮತ್ತು ಅಶುದ್ಧ ಪ್ರಾಣಿಗಳನ್ನು ತಿನ್ನುತ್ತಿದ್ದರು ಎಂಬುದಕ್ಕೆ ಯಾವ ಆಧಾರವು ಇಲ್ಲ. ಪೇತ್ರನು ಅಂಥ ಆಹಾರವನ್ನು ಸೇವಿಸಲಿಲ್ಲ ಎಂಬುದು ನಮಗೆ ಗೊತ್ತಿದೆ ಮತ್ತು ಬಲಹೀನರು ಸಸ್ಯಹಾರವನ್ನು ಸೇವಿಸುತ್ತಿದ್ದರು(ಅ.ಕೃ 10:2) ಮತ್ತು ಈ ವಿವಾದದಲ್ಲಿ ಮದ್ಯಪಾನವು ಸಹ ಒಂದು ಸಮಸ್ಯಯಾಗಿ–ತ್ತು. ಅದು ಸಂಪ್ರದಾಯಿಕ ಅಶುದ್ಧತೆಯನ್ನು ಸೂಚಿಸುತ್ತದೆ ರೋಮಾ 14:14ರಲ್ಲಿ ಈ ಪದ ಅಶುದ್ಧ ಎಂಬುದು ಸ್ಪಷ್ಟವಾಗಿದೆ. ಈ ಪದವು ಪುರಾತನ ಗ್ರೀಕ್ ಹಳೆಯ ಒಡಂಬಡಿಕೆಯ ಅನುವಾದವು ಅಶುದ್ಧ ಪ್ರಾಣಿಗಳಿಗೆ ಹೋಲಿಕೆಯಾಗಿದೆ ಆದರೆ ಯಾಜಕಾಂಢ 11ರಲ್ಲಿ ತಿಳಿಸಿರುವ ಅಶುದ್ಧ ಪ್ರಾಣಿಗಳಿಗಲ್ಲ. ಹಾಗಾಗಿ ರೋಮನ್ ಸಮುದಾಯದಲ್ಲಿ ಕೆಲವರು ಅನ್ಯೊನ್ಯತೆಯ ಕೂಟಗಳಲ್ಲಿ ಆಹಾರವನ್ನು ಸೇವಿಸುತ್ತಿರಲಿಲ್ಲ ಏಕೆಂದರೆ ಅಲ್ಲಿ ಬೇಕಾಗುವ ಆಹಾರವನ್ನು ತಯಾರಿಸಿದ್ದರೋ

ಇಲ್ಲವ್ರೋ ಎಂಬುದು ಮನದಟ್ಟಾಗಿರಲಿಲ್ಲ. ಕೆಲವು ದಿನಗಳ ಕಾಲ ಆಚರಿಸುತ್ತಿದ್ದರು. ಇದು ವಾರಕೊಮ್ಮೆ ಪಾಲನೆಯ ಸಬ್ಬತಿಗೆ ಹೋಲಿಸಿಲ್ಲ ನಮಗೆ ಗೊತ್ತಿರುವ ಹಾಗೆ ಪೌಲನು ನಿತ್ಯವು ಪಾಳನೆ ಮಾಡುತ್ತಿದ್ದನು(ಅ.ಕೃ 13:14; 16:13 ಮತ್ತು 17:2). ಯೆಹೂದ್ಯರ ಬೇರೆ ಬೇರೆ ಹಬ್ಬದ ದಿನಗಳು, ಉಪವಾಸ ದಿನಗಳಿಗೆ ಅನ್ವಯವಾಗಿದೆ. ಪೌಲನು ಈ ವಾಕ್ಯಗಳ ಮೂಲಕ ಒತ್ತಾಯಪಡಿಸುವುದೇನೆಂದರೆ, ಯಾರೂ ಪ್ರಾಮಾಣಿಕವಾಗಿ ಧರ್ಮಆಚರಣೆಯನ್ನು ಮಾಡಿ ಇವುಗಳ ಮೂಲಕವೇ ರಕ್ಷಣೆಯೆಂದು ತಿಳಿದು ಕೊಳ್ಳದೆ ಇದ್ದರೆ ಸಹಿಸಿಕೊಳ್ಳಿರಿ. ನಮ್ಮ ನಂಬಿಕೆಗೆ ಅಗತ್ಯವಿರುವ ಅಂಶಗಳನ್ನು ನಾವು ಯಾವಾಗಲೂ ಒಪ್ಪದೆ ಇದ್ದಾಗ್ಯೂ ಕ್ರೈಸ್ತರ ಐಕ್ಯತೆಯು ತಾಳ್ಮೆ ಮತ್ತು ಸಹಿಷ್ಣುತೆಯನ್ನು ವ್ಯಕ್ತಪಡಿಸುತ್ತದೆ.

**ತರಗತಿಯಲ್ಲಿ ಈ ಪ್ರಶ್ನೆಯನ್ನು ಕೇಳಿ: ಸವೆಂತ್–ಡೇ–ಅಡ್ವೆಂಟಿಸ್ಟ್‌ರಾಧ ನಾವು ಯಾವುದನ್ನಾದರೂ ನಂಬಿ ಅದನ್ನು ಆಚರಣೆ ಮಾಡುತ್ತಿದ್ದರೆ, ಸವೆಂತ್–ಡೇ–ಅಡ್ವೆಂಟಿಸ್ಟ್ ಎಂದು ಹೇಳಿಕೊಳ್ಳುವವರೆಲ್ಲರು? ಅದನ್ನು ನಂಬಿದೆ ಅದಕ್ಕೆ ಬದ್ಧರಾಗಬೇಕಿಲ್ಲ.**

**ಗುರುವಾರ** **ನವೆಂಬರ್ 29**

**ದ್ಯೇಯದಲ್ಲಿ ಐಕ್ಯತೆ**

**ಲೂಕ 22:24ರಲ್ಲಿ ಕರ್ತನ ರಾತ್ರಿ ಭೋಜನದ ಸಮಯದಲ್ಲಿ ಶಿಷ್ಯರ ಮನಸ್ಥಿತಿಯನ್ನು ಅ.ಕೃ 1:14 ಮತ್ತು 2:1, 46ರಲ್ಲಿ ಪಂಚಾಶತ್ತಮಕ್ಕಿಂತ ಮುಂಚೆಯೇ ಆದ ಅನುಭವದಲ್ಲಿ ಅವರ ಮನಸ್ಥಿತಿಯ ವ್ಯತ್ಯಾಸವೇನು. ಆ ವ್ಯತ್ಯಾಸಗಳು ಅವರ ಜೀವನದಲ್ಲಿ ಏಕೆ ಆದವು?**

____________________________________________

____________________________________________

____________________________________________

ಅ.ಕೃ.1:14 ಮತ್ತು 2:46, "ಏಕಮನಸ್ಸು" ಎಂಬುದರ ಅರ್ಥವೆಂದರೆ "ನಿತ್ಯವು ಒಂದೇ ಮನಸ್ಸು" ಅವರೆಲ್ಲರೂ ಒಂದೇ ಸ್ಥಳದಲ್ಲಿ ಒಂದುಗೂಡಿ ಯೇಸುವು ಸಹಾಯಕನನ್ನು ಕಳಿಸುತ್ತೇನೆ ಎಂಬ ವಾಗ್ದಾನವು ನೆರವೇರಲಿ ಎಂದು ಪ್ರಾರ್ಥಿಸುತ್ತಿದ್ದರು.

ಅವರು ಕಾಯುತ್ತಿರುವಾಗ ಒಬ್ಬರೊಬ್ಬರು ಟೀಕಿಸುವುದನ್ನು ಪ್ರಾರಂಭಿಸಲು ಸುಲಭವಾಗುತ್ತಿತ್ತು. ಕೆಲವರು ಪೇತ್ರನು ಯೇಸುವನ್ನು ನಿರಾಕರಿಸಿದ ಬಗ್ಗೆ(ಯೋಹಾನ18:

15–18, 25–27) ತೋಮನು ಯೇಸುವಿನ ಪುನರುತ್ಥಾನದ ಬಗ್ಗೆ ಸಂಶಯ ಪಟ್ಟಿದ್ದು (ಯೋಹಾನ 20:25) ಅವರು ಯೋಹಾನ ಮತ್ತು ಯಾಕೋಬನನ್ನು ನೆನೆಪು ಮಾಡಿಕೊಳ್ಳಬಹುದಿತ್ತು. ಯೇಸುವಿನ ರಾಜ್ಯದಲ್ಲಿ ತಮಗೆ ಸ್ಥಾನ ಬೇಕೆಂದು ಕೇಳಿದ್ದು(ಮಾರ್ಕ 10:35–41) ಮತ್ತಾಯ ಸುಂಕದಮನು ಎಂಬುದನ್ನು(ಮತ್ತಾಯ 9:9)

ಇವುಗಳ ಬಗ್ಗೆ ಗುಣಗುಟ್ಟಬಹುದಿತ್ತು. ಈ ಸಿದ್ಧತೆ ದಿನಗಳು ತಮ್ಮನ್ನು ತಾವು ಆಳವಾಗಿ ಆತ್ಮಾವಲೋಕನ ಮಾಡಿಕೊಳ್ಳುವಂಥ ದಿನಗಳು ಶಿಷ್ಯ–ರಿಗೆ ಆತ್ಮೀಕತೆಯ ಅಗತ್ಯವಿತ್ತು. ಹಾಗಾಗಿ ಅವರು ಆತ್ಮಗಳ ರಕ್ಷಣೆಯ ಕೆಲಸದಲ್ಲಿ ಪವಿತ್ರಾತ್ಮನ ಸಹಾಯಕ್ಕಾಗಿ ಕರ್ತನಲ್ಲಿ ಮೊರೆಯಿಟ್ಟರು. ಅವರು ಅವರಿಗೋಸ್ಕರ ಯಾವ ಆರ್ಶೀವಾದಗಳನ್ನು ಕೇಳಿಕೊಳ್ಳಲಿಲ್ಲ. ಆತ್ಮಗಳನ್ನು ರಕ್ಷಿಸುವ ಭಾರವು ಅವರ ಮೇಲೆ ಇತ್ತು. ಲೋಕಕ್ಕೆ ಸುವಾರ್ತೆ ಸಾರಬೇಕು ಎಂಬ ಅರಿವು ಅವರಿಗೆ ಇತ್ತು. ಕ್ರಿಸ್ತನು ವಾಗ್ದಾನ ಮಾಡಿದ ಬಲದ ಬಗ್ಗೆ ಪ್ರಚಾರ ಮಾಡಿದರು–ಎಲ್ಲೆನ್ ಜಿ ವೈಟ್ "ದಿ ಆಕ್ಟ್ಸ್ ಆಫ್ ಅಪೋಸ್ಟಲ್ಸ್" ಪು–37

ಶಿಷ್ಯರಲ್ಲಿದ್ದ ಅನ್ಯೋನ್ಯತೆಯು ಮತ್ತು ಅವರ ತೀವ್ರವಾದ ಪ್ರಾರ್ಥನೆಯು ಅವರನ್ನು ಪಂಚಾಶತ್ತಮಕ್ಕೆ ಸಿದ್ಧ ಮಾಡಿತು. ಅವರು ದೇವರ ಹತ್ತಿರ ಬರುತ್ತಿದ್ದಂತೆ ಅವರಲ್ಲಿ ಇದ್ದ ಭಿನ್ನತೆಯು ಬಿಟ್ಟು ಹೋಗಿ ಪವಿತ್ರಾತ್ಮನು ಶಿಷ್ಯರ ಭಯ ತೆಗೆದು ಹಾಕಿ ಧ್ಯರ್ಯದಿಂದ ಯೇಸುವಿನ ಪುನರುತ್ಥಾನ ಸಾಕ್ಷಿಗಳಾಗಲು ಸಿದ್ಧ ಪಡಿಸಿದನು. ಯೇಸುವು ಅವರ ತಪ್ಪುಗಳನ್ನು ಕ್ಷಮಿಸಿದ್ದಾನೆ ಎಂಬುದು ಅವ–ರಿಗೆ ಗೊತ್ತಿತ್ತು. ಇದು ಅವರನ್ನು ಧೈರ್ಯ ಮುನ್ನಡೆಯಲು ಸಹಾಯಕವಾಯಿತು. ಯೇಸುವು ಅವರ ಜೀವನದಲ್ಲಿ ಏನು ಮಾಡಿದ್ದಾನೆ ಎಂಬುದು ಅವರಿಗೆ ಗೊತ್ತಿತ್ತು. ಯೇಸುವಿನಲ್ಲಿದ್ದ ರಕ್ಷಣೆಯ ವಾಗ್ದಾನದ ಬಗ್ಗೆಯು ಅವರಿಗೆ ಗೊತ್ತಿತ್ತು. ಹಾಗಾಗಿ ಯೇಸುವಿನ ಗುಣಗಳನ್ನು ಅಳವಡಿಸಿಕೊಂಡು ಆತನ ರಾಜ್ಯವನ್ನು ವಿಸ್ತರಿಸಲು ಕೆಲಸ ಮಾಡಬೇಕೆಂಬ ಆ ನಂಬಿಗಸ್ತರ ಆಸೆಯಗಿತ್ತು, ಹಾಗಾಗಿ ಕರ್ತನು ಅವರ ಮೂಲಕ ಬಲಶಾಲಿ ಕಾರ್ಯಗಳನ್ನು ಮಾಡುತ್ತಿದ್ದನು. ಸಭೆಯಾಗಿ ಇಂದು ನಮಗೆ ಇದು ಎಂಥ ಪಾಠವಾಗಿದೆ?

**ಬೇರೆಯುವರ ತಪ್ಪುಗಳನ್ನು ಕಂಡು ಹಿಡಿಯುವುದು ಬಹಳ ಸುಲಭ, ನಾವು ಇಂಥ ತಪ್ಪುಗಳನ್ನು ಬದಿಗಿಟ್ಟು, ಸಭೆಯಾಗಿ ಐಕ್ಯತೆಯಿಂದ ದೇವರ ಚಿತ್ತದಂತೆ ಹೇಗೆ ಕೆಲಸ ಮಾಡಬೇಕು**?

**ಹೆಚ್ಚಿನ ಚಿಂತನೆಗಾಗಿ: ಎಲ್ಲೆನ್ ಜಿ ವೈಟ್ "ಯುನಿಟಿ ಇನ್ ಡೈವರ್ಸಿಟಿ" ಪು. 98–103, ಇವಾಂಜಲಿಸಂ**

ಈ ಕೆಳಗಿರುವ ಉಲ್ಲೇಖವು ಆದಿ ಸಭೆಯು ಕ್ರಿಸ್ತನಲ್ಲಿ ಐಕ್ಯರಾಗಿದ್ದದರಿಂದ ಅವರಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಐಕ್ಯತೆಯಿಂದ ಇದ್ದರು, ಹಾಗಾಗಿ ಅವರು ಲೋಕಕ್ಕೆ ಬಲಶಾಲಿ ಸಾಕ್ಷಿಯಾದರು. ವಾಕ್ಯಗಳು ಹೇಳುವ ಪ್ರಕಾರ ಸಭೆಯಲ್ಲಿ ಹೇಗೆ ಪವಿತ್ರಾತ್ಮನು ಆದಿ ಸಭೆಯವರ ನಿರ್ಧಾರಗಳಲ್ಲಿ ಮಾರ್ಗದರ್ಶನ ಮಾಡುತ್ತಿದ್ದನು. ಇದು ಒಂದೊಕ್ಕೊಂದು ಸಂಬಂಧಿಸಿದ ಮೂರು ರೀತಿಯಲ್ಲಿ ಮಾಡಿದ್ದಾನೆ

1. ಪ್ರಕಟ: (ಉದಾ, ಜನರು ಏನು ಮಾಡಬೇಕೆಂದು ಪವಿತಾತ್ಮನು ಹೇಳಿದನು, ಕೊರ್ನೇಲ್ಯನು, ಅನನೀಯ, ಫಿಲಿಪ್ಪಿ ಮತ್ತು ಚಿಟ್ಟು ಹಾಕುವುದು)
2. ಸತ್ಯವೇದ/ವಾಕ್ಯಗಳು (ಸಭೆಯು ಸತ್ಯವೇದ ವಾಕ್ಯಗಳ ಸಹಾಯದಿಂದ ತೀರ್ಮಾನಗಳನ್ನು ತೆಗೆದು ಕೊಳ್ಳುತ್ತಿದ್ದರು)
3. ಒಮ್ಮತ (ಕ್ರೈಸ್ತ ಸಮುದಾಯದಲ್ಲಿ ಪವಿತ್ರಾತ್ಮನು ಒಮ್ಮತದಿಂದಿರಲು ಪ್ರೇರೇಪಿಸಿದನು ಹಾಗಾಗಿ ಕೊನೆಯಲ್ಲಿ ಸಭೆಯಲ್ಲಿ ಇದು ಪವಿತ್ರಾತ್ಮನ ಕೆಲಸವೆಂದು ಅವರು ಅರಿತುಕೊಂಡರು)

ನಂಬಿಗಸ್ತರ ಸಮುದಾಯದಲ್ಲಿ, ಸಂಸ್ಕೃತಿ, ತತ್ವದ ಮತ್ತು ಥಿಯಾಲಾಜಿ ವಿವಾದಗಳು ಬಂದಾಗ ಪವಿತ್ರಾತ್ಮನು ಅವರು ಒಮ್ಮತದಿಂದ ನಿರ್ಧಾರ ತೆಗೆದು ಕೊಳ್ಳುವ ಕಾರ್ಯದಲ್ಲಿ ಸಹಾಯಕನಾಗಿದ್ದನು. ಈ ಕಾರ್ಯದಲ್ಲಿ ಸಮುದಾಯದ ನಂಬಿಗಸ್ತರು ಮತ್ತು ನಾಯಕರು ಸಕ್ರಿಯವಾಗಿ ಭಾಗಿಗಳಾಗಿದ್ದರು ಮತ್ತು ವಿವೇಕಕ್ಕಾಗಿ ಮುಖ್ಯವಾಗಿ ಪ್ರಾರ್ಥಿಸುತ್ತಿದ್ದರು. ದೇವರ ವಾಕ್ಯಗಳನ್ನು ಅರ್ಥಮಾಡಿಕೊಳ್ಳಲು ಸಮುದಾಯದವರಿಗೆ ಪವಿತ್ರಾತ್ಮನ ಮಾರ್ಗದರ್ಶನವು ಯಾವಾಗಲೂ ಇರುತ್ತಿತ್ತು. ಅದಲ್ಲದೆ ಅವರ ಅನುಭವಗಳಲ್ಲಿ ಅಗತ್ಯಗಳಲ್ಲಿ ನಾಯಕರು ಸೇವೆಯಲ್ಲಿ ಪವಿತ್ರಾತ್ಮನ ಮಾರ್ಗದರ್ಶನ ಅವರಿಗೆ ಇತ್ತು. ಸಭೆಯ ಅನೇಕ ನಿರ್ಧಾರಗಳನ್ನು ತೆಗೆದು ಕೊಳ್ಳುವ ಕಾರ್ಯದಲ್ಲಿ ಪವಿತ್ರಾತ್ಮನ ಮಾರ್ಗದರ್ಶನವಿತ್ತು, ಅದರಲ್ಲಿ ಸತ್ಯವೇದದ ವಾಕ್ಯಗಳು, ಪ್ರಾರ್ಥನೆಯು ಮತ್ತು ಅನುಭವಗಳು ಥಿಯಾಲಾಜಿ ಪ್ರತಿಬಿಂಬದ ಮೂಲವಸ್ತುಗಳಾಗಿದ್ದವು. ಡೆನಿಸ್ ಪೋರ್ಟಿನ್ "ದಿ ಹೋಲಿ ಸ್ಪಿರಿಟ್ ಆಂಡ್ ದಿ ಚರ್ಚ್" ಪು. 321, 322.

**ಚರ್ಚೆಯ ಪ್ರಶ್ನೆಗಳು**

1. ತರಗತಿಯಲ್ಲಿ ಸವೆಂತ್–ಡೇ–ಅಡ್ವೆಂಟಿಸ್ಟ್‌ರಾದ ನಾವು ಯಾವ ಬೋಧನೆಗಳು ಮತ್ತು ಆಚರಣೆಗಳು ಅಗತ್ಯವು ಯಾವವು ಅಗತ್ಯವಿಲ್ಲವೆಂದು ಹೇಗೆ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂಬ ಬುಧವಾರದ ಪ್ರಶ್ನೆಯ ಉತ್ತರವನ್ನು ಜ್ಞಾಪಿಸಿಕೊಳ್ಳೋಣ.

2. ಯೇಸುವಿನ ಮರಣ ಮತ್ತು ಪುನರುತ್ಥಾನದಲ್ಲಿ ನಾವು ನಂಬುವ ಹಾಗೆ ಇದನ್ನು ನಂಬುವ ಇತರ ಕ್ರೈಸ್ತ ಪಂಗಡಗಳವರೊಂದಿಗೆ ನಾವು ಹೇಗೆ ವ್ಯವಹರಿಸ ಬಹುದು?

**ಸಾರಾಂಶ**: ಯೇಸು ಪ್ರೀತಿಸಿದಂತೆ, ಸಹೋದರ ಸಹೋದರಿಯರು ಒಬ್ಬನೊಬ್ಬರು ಪ್ರೀತಿಸುವುದೇ ಐಕ್ಯತೆಗೆ ಸಾಕ್ಷಿಯಾಗಿದೆ. ನಮ್ಮ ಪಾಪಗಳ ಕ್ಷಮಾಪಣೆ ಮತ್ತು ನಮಗಿರುವ ರಕ್ಷಣೆಯು ಅಡ್ವೆಂಟಿಸ್ಟ್ ಅನ್ಯೊನ್ಯತೆಯನ್ನು ಮತ್ತು ನಂಬಿಕೆಯ ಸಾಕ್ಷಿಗಳಾಗಿದ್ದೇವೆ.